ದಿನಾಂಕಃ 13.04.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಅವರಿಂದ –**

1. ನನ್ನ ಹೆಸರು ದಶರಥ. ನನಗೆ 58 ವರ್ಷ ವಯಸ್ಸು. ನಾನು ಕೆ ಆರ್.ನಗರ ತಿಪಟೂರಿನಲ್ಲಿ ವಾಸವಾಗಿದ್ದೇನೆ. 1 ನೇ ವಾದಿ ಸುಂದರಮ್ಮ ನನ್ನ ಅತ್ತಿಗೆ, 2 ನೇ ವಾದಿ ಭಾಸ್ಕರ ನನ್ನ ಅಣ್ಣನ ಮಗ. ವಾದಿಗಳು ಒಟ್ಟು ಎಷ್ಟು ಜನರ ಮೇಲೆ ದಾವೆ ಸಲ್ಲಿಸಿದ್ದಾರೆ, ಯಾವ ಸರ್ವೇ ನಂ.ಗಳ ಮೇಲೆ ದಾವೆ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ.

2. ತಿಮ್ಮೇಗೌಡ ಹಾಗೂ 1 ನೇ ವಾದಿ ಸುಂದರಮ್ಮ ಅವರ ಮದುವೆ ಮುಂಚೆ ಅವರ ಕುಟುಂಬದಲ್ಲಿ ಏನು ವ್ಯವಹಾರ ನಡೆದಿರುತ್ತದೆ ನನಗೆ ಗೊತ್ತಿಲ್ಲ ಎಂದರೆ ಸರಿ. ತಿಮ್ಮೇಗೌಡರ ವಂಶಿಕರು ಯಾರು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದ ಅಂಶಗಳನ್ನು ತಿಳಿದುಕೊಂಡಿರುತ್ತೇನೆ.

3. ನನ್ನ ದೊಡ್ಡಮ್ಮ ಸುಬ್ಬಮ್ಮ ಅವರು ಕೆ ಆರ ನಗರದ ಅರ್ಜುನ ಹಳ್ಳಿಯವರು. ಸದರಿಯವರು 1998 ರಲ್ಲಿ ತೀರಿಹೋಗಿರುತ್ತಾರೆ. ಅವರ ಮದುವೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸುಬ್ಬಮ್ಮ ಅವರು ತಮ್ಮೇಗೌಡರಿಗೆ ಮದುವೆ ಆಗಿರುತ್ತಾರೆ. ಸದರಿ ಸುಬ್ಬಮ್ಮ ಅವರು

ಹೊನಕೆರೆ ಗೌಡರನ್ನು ಮದುವೆ ಆಗಿದ್ದು ಸದರಿಯವರಿಗೆ ರಾಮಕೃಷ್ಣೇಗೌಡ ಮಗ ಇದ್ದಾನೆ ಎಂದರೆ ಗೊತ್ತಿಲ್ಲ. ಸದರಿಯವರ ಮದುವೆ ಕಾಲದಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿಯಲ್ಲ. ಬೇರೆಯವರು ಹೇಳಿದ ಆಧಾರದ ಮೇಲೆ ಇರಬಹುದು ಎಂದು ಊಹೆ ಮೇರೆಗೆ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ಈ ದಾವೆಯ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ನಾನು ವಾದಿಯರಿಗೆ ಸಂಬಂಧಿಕನಾಗಿದ್ದು ಅವರ ಪರ ನ್ಯಾಯಾಲಯದ ಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಈ ದಾವೆಯ ವಿಚಾರ ಗೊತ್ತಿಲ್ಲದಿದ್ದರು ಸಹ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ, ಹುಣಸೂರು.